

ವಾಣಿ ವಿಲಾಸ ಅಣೆಕಟ್ಟು

ಇಲ್ಲ. ನಮ್ ಅಮ್ಮಂತೂ ಕಾಳ್ ಹಪ್ಪಳ, ಬೇಳೆ ಹಪ್ಪಳ, ಅಕ್ಕಿ ಹಪ್ಪಳ, ಸಂಡಿಗೆ ಮನಾ...ರ ಮಾಡದು. ಇನ್ನಾ ನಮ್ಮಜ್ಜಿ ಸ್ಯಾವಿಗೆ ಮಾಡದಂತೆ. ಯಾರನಾ ನೆಂಟ್ರು ಬಂದೇಟಿಗೆ ಡಬ್ಬದಗಳಿಂದ ಸ್ಯಾವಿಗೆ ತೆಗೆಯದು ಬಸಿಯದು ಹಾಲು ಬೆಲ್ಲ ಹಾಕಿ ನೀಡದು.

ರ: ಅಮ್ಮ ಇವಾಗ್ಯರು ಫ್ಯಾನಿಗೆ ಮಾಡ್ತಿದ್ದರು. ಎಲ್ಲಾ ಪಾಕೆಟು. ಅಷ್ಟೊಂದು ಪಾಟ್ ಬಿದ್ದು ಯಾರ್ ಮಾಡ್ತಾರೆ. ದಿನ ಎಲ್ಲಾ ಕುಕ್ಕರ್ ಶ್ ಕ್ಯಂಡು ಟಿವಿ ನೋಡದೆ ವೋತ್ತು ಸಾಲಲ್ಲ.

ಅಲ್ ಕಣೆ ಮಳೆ ಬಂದ್ ಬಂದ್ ಗಿಡ ಹಸರಾಗಿ ಬೆಳುದ್ದವೆ. ಷಾದರ ಆಗತತೆ ಸುತ್ತಾ ಮೊದಲು ಕ್ಲೀನ್ ಮಾಡ್ಸು.

ಸ: ಹೂಂ ಕಣೆ ಮಾಡುಸ್ ಬೇಕು ಮೊನ್ನಿನಾಗೆ ಒಬ್ಬನು ಬಂದುದ್ದ 500 ರೂಪಾಯಿಗೆ ಒಪ್ಪಸಿದ್ದೆ. ಹೂಂ ಅಂದು ತಿರುಗ್ ದಿನಕ್ಕೆ 500 ಆಗಲ್ಲ ಅಂತ ತಾರಾ ತಿಗುಡಿ ಮಾಡ್ದ. ನಡಿ ಅಂತ ಗದುಮಿದೆ.

ರ: ಮಾರ್ಕೆಟ್ ಗೆ ಹೋಗಿದ್ದಾ... ನಾನು ತರಕಾರಿ ತರಬಕು. ಮುಳುಗಾಯಿ ಹಸುರ್ ಗಾಯಿ ತಗೋಬೇಕು. ಮುಳುಗಾಯಿ ನಮ್ ಕಡೇವು ಸಿಗದಿಲ್ಲ ಬಿಡು. ನಾವಿಬ್ಬರೂ ಸಂತೀಗೆ ಜತೀಗೆ ಹೆಂಗ್ ವಂಡ್ತಿದ್ವೆ. ಅಲಾ. ನಾವ್ ಸಣ್ಣರಿದ್ದಾಗ ಸಂತೆ ಹೊಂಡುದತ್ರ ಸಂತೆ ನಡಿಯದು. ಸುತ್ತ ಹಳ್ಳೇರು ತರಕಾರಿ ಸೊಪ್ಪು ತರರು ಎಂತಾ ಶೆನಾಗಿರದು. ನಮ್ ಕಡೆ ಭೂಮಿನೆ ಹಂಗೆ ಕಪ್ಪು ಕೆಂಪು ಮಣ್ಣು ಮಿಶ್ರಿತ. ಸಂತೆ ಎಲ್ಲಾ ಮುಗಿದ್ ಮೇಲೆ ನಿಮ್ಮಮ್ಮ ಫಳಾರ ಕೊಡಸದು ನಮ್ಮುನ್ನ ಸಮಾಧಾನ ಮಾಡೋಕೆ... ದಾರಿಗುಂಟ ತಿನ್ಕಂತ ಬರ್ತಿದ್ವಿ.

ಬಸ್ ಒಂದು ಸಂತೆ ಹೊಂಡುಕ್ಕೆ ಬಿದ್ದಂತಾಗಿದೆ ಅಲ್ಲಿ ಸಂತೆ ಮಾಡದು ನಿಲ್ಲಿಸಿದ್ದಾರೆ. ಪಾಪ ಅವಾಗಂತೂ ಒಂದ್ 50 –60 ಜನ ಸತ್ತೊಗಿಬಿಟ್ರು. ಕ್ರೇನ್‌ನಾಗೆ ಬಸ್ ಎತ್ತಿದ್ದು ಅದುನ್ನ ನೋಡಕೆ ಇಡೀ ದುರ್ಗನೇ ಸೇರಿತ್ತು. ನಾವು ಕಂಡ ಟ್ರಾಜೆಡಿ ಇದೇ ನೋಡು.

ಸ: ಹೂಂ ಪಾಪ. ಸಂತೆ ಹೊಂಡ ನಾ ಪಾಳೆಗಾರರು ಕುಡಿಯುವ ನೀರಿನ ವ್ಯವಸ್ಥೆಗೆ ಮಾಡಿದ್ರಂತೆ. ನಾಯಕರ ಕಾಲದಲ್ಲೂ ಸಂತೆ ಅಲ್ಲೇ ನಡೀತಿತ್ತು. ಬಂದ ಜನಗಳಿಗೆ ನೀರು ಸಿಗಲಿ ಅಂತ ನಿರ್ಮಾಣ ಮಾಡಿಸಿದ್ದರಂತೆ. ಸಿಹಿನೀರು ಹೊಂಡದಿಂದ ಭೂಗತ ಕಾಲುವೆ ಇದೆಯಂತೆ ಇದಕ್ಕೆ. ಪಾಳೇಗಾರರು ಜನೋಪಯೋಗಿ ಕೆಲಸಗಳು ಆಗಿನ ಕಾಲಕ್ಕೆ ಮಾಡಿಟ್ಟಿದ್ದಾರೆ.

ರ: ಯುಗಾದಿ ಆದ್ ಮ್ಯಾಕೆ ಬರೋ ಅಕ್ಕ ತಂಗಿ ಭೇಟಿ ಉತ್ಸವ ಮರೆತ್ಯಾ. ಬರಗೇರಮ್ಮ ತಿಪ್ಪಿನಗಟ್ಟಮ್ಮ ಭೇಟಿ ವಿಜೃಂಭಣೆಯಿಂದ ನಡೆಯುತ್ತದೆ. ಬಹಳ ದಿನದಿಂದ ಮಾತು ಬಿಟ್ಟಿರೋರು ಈ ಉತ್ಸವದಲ್ಲಿ ಸಿಕ್ರೆ ಮಾತಾಡಿಸಬೇಕು ಅಂತ ಪ್ರತೀತಿ ಇದೆ. ಉಧೋ ಉಧೋ ಬರಗೇರಮ್ಮ ಏಕನಾಥೇಶ್ವರಿ ಅಂತ ಕೂಗುತ್ತಾ ಇದ್ವಿ. ಉರುಮೆ ,ತಮಟೆ, ಡೊಳ್ಳು ಎಲ್ಲವನ್ನೂ ಕಣ್ಣರಳಿಸಿಕೊಂಡು ನೋಡುತ್ತಾ ಇದ್ವಿ. ರಾತ್ರಿ ಎಷ್ಟೊತ್ತನ್ನ ಆಗಲಿ ಖುಷಿಯಿಂದ ಆಸ್ವಾದಿಸುತ್ತಾ ಇದ್ವಿ.

ಸ:ಸಿಡಿ ಆಡದು ಶನಿವಾರ ನೋಡತಿದ್ವಿ.

ಕಳೆದ ವಾರದ ‘ಚೆನ್ನುಡಿ’
ಊರ ಮೇಲೊಂದೂರು ದೂರವೇನೋ ತಮ್ಮಯ್ಯ...
ಕೇಳಿ ಎಚ್. ಆರ್. ಸುಜಾತಾ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.



ಪಾದಗುಡಿ ಹತ್ತಿರ. ಆಮೇಲೆ ಉಗಾದಿಗೆ ನೀರ್ ಹಬ್ಬ. ಮಾವಂದಿರೆಗೆಲ್ಲಾ ನೀರು ಉಗ್ಗೋ ಹಬ್ಬ. ಅತ್ತಿಗೆ ನಾದಿನೀರು ಪರಸ್ಪರ ಎರಚಾಡರು. ಎಲ್ಲರೂ ಸಂಬಂಧಿಕರೇ ಆಗಬೇಕಿಂದಿಲ್ಲಾ. ಬಾವಣಿಕೆಯ ಬಂಧದಲ್ಲಿ ಇರುವವರು. ಉಗ್ಗಾಟ ಆಡುತ್ತಾ ಇದ್ರು.

ರ: ದಸರಾ ಹಬ್ಬದಲ್ಲಿ ಮುರುಘಾ ಮಠದಲ್ಲಿ ದಸರಾ ಸಂಸ್ಕೃತಿ ಉತ್ಸವ ನಡೀತಿತ್ತು. ಆಟ ಎಲ್ಲಾ ವಯೋಮಾನದವರಿಗೂ ಇರುತಿತ್ತು ಆಡ್ತಿದ್ವಿ, ಮಠದಗೆ ಉಣತಿದ್ವಿ. ಬರುಬರುತ್ತಾ ಮಠ ಅಭಿವೃದ್ಧಿ ಆಗುತ್ತಾ ಬಂತು. ಎಷ್ಟು ಬೇಗ ಅಭಿವೃದ್ಧಿಯಾಯ್ತೋ ಅಷ್ಟೇ ಬೇಗ ಅಧಃಪತನಕ್ಕೆ ಇಳೀತು ಮುಂದೆ.

ನಮ್ ದುರ್ಗ ಬರಪೀಡಿತ ಪ್ರದೇಶ. ಇಲ್ಲಗಳ ಸರಮಾಲೆಯೇ ಇದ್ದರೂ ಜನ ಕಷ್ಟಧಾರಿಗಳು. ಸಾಹಿತ್ಯ ಸಂಸ್ಕೃತಿ ಮೈಗೂಡಿಸಿಕೊಂಡ ಊರು. ಯಾವುದನ್ನೂ ಯಾರನ್ನೂ ಸುಲಭವಾಗಿ ನಂಬದ ಜಾಯಮಾನ. ಇದು ಬಹುಶಃ ಇತಿಹಾಸ ಕಲಿಸಿದ ಪಾಠ ಇರಬಹುದು. ಆದರೆ ಒಮ್ಮೆ ಹಚ್ಚಿಕೊಂಡರೆ ಒಪ್ಪಿಕೊಂಡರೆ ಕೊನೆಯವರೆಗೂ ಕಾಪಾಡಿಕೊಳ್ಳುತ್ತಾರೆ. ಇದು ಬೇರೆ ಜಿಲ್ಲೆಯ ಜನರ ಅಂಬೋಣ. ಸಂಪ್ರದಾಯವನ್ನೂ ಬಿಡದೆ ಪಾಲಿಸಿಕೊಂಡು ಹೊಸತನಕ್ಕೆ ತೆರೆದುಕೊಳ್ಳುತ್ತಾ ಇರುವ ಹಳ್ಳಿಯಂತಹ ನಗರ. ಪ್ರಖರ ಬಿಸಿಲು ಇದ್ದಾಗ್ಯೂ ಸಂಜೆ ಆಗುತ್ತಿದ್ದಂತೆ ತಂಗಾಳಿ ಬೀಸುತ್ತದೆ. ಕೋಟೆಯ ಕಲ್ಲು ಬಂಡೆಗಳು ಕಾದು ತಂಪಾಗಿ ತಣ್ಣನೆಯ ಮಾರುತ ಕೆಳಗಿಳಿಸಿ ಕೊಡುತ್ತದೆ. ಬೇಗೆಯಲ್ಲಿ ತಣಿದು, ದಣಿದು ಬಂದವರಿಗೆ ಅಹ್ಲಾರವಾಗುತ್ತದೆ. ಎಷ್ಟೇ ಬಿಸಿಲಿದ್ದರೂ ಬಿಸಿ ಮೆಣಸಿನಕಾಯಿ ಬಜ್ಜಿ ಮಂಡಕ್ಕಿ ತಿನ್ನುವ ಭೂಪರು. ಹೇಗಿದ್ದರೇನು ನಮ್ ಊರೇ ನಮಗೇ ನಂದನವನ.

ಸ್ವರ್ಗ ನಮ್ ದುರ್ಗ. ■